# ವಾರ್ತಾ ವಿಶ್ಲೇಷಣೆ

## ಮಹಿಳೆಯರ ಹಕ್ಕುಚ್ಯುತಿ

ಇಂದು ಮಹಿಳೆಯರ ಸಮಾನ ಹಕ್ಕು ಬಾಧ್ಯತೆಗಳ ವಿಷಯವಾಗಿ ಬಹಳಷ್ಟು ಕೇಳಿಬರುತ್ತಿದೆ. ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿಯೂ ಪುರುಷರಿಗೆ ಸಮಸಮವಾಗಿ ಕಾರ್ಯನಿರ್ವಹಿಸುತ್ತಿರುವರು. ಇದೇ ಸಂದರ್ಭದಲ್ಲಿಯೇ ಸ್ತ್ರೀಯರ ಹಕ್ಕನ್ನು ಹತ್ತಿಕ್ಕುವ, ಅವರನ್ನು ಪುರುಷರ ಅಧೀನರನ್ನಾಗಿಸುವ ಪ್ರಯತ್ನವೂ ನಡೆಯುತ್ತಿದೆ. ಧರ್ಮದ ಮೂಲಭೂತವಾದಿಗಳೆ ಸಾಮಾನ್ಯವಾಗಿ ಈ ಪ್ರಯತ್ನದಲ್ಲಿ ತೊಡಗುವುದು.

ಅಮೆರಿಕದ ಸದರ್ನ್ ಬ್ಯಾಪ್ಟಿಸ್ಟ್ ಚರ್ಚ್(ಪ್ರಾಟೆಸ್ಟೆಂಟ್ ಮತಕ್ಕೆ ಸೇರಿದ ಒಂದು ಪಂಗಡ) ಮಹಿಳೆಯರು ಬೋಧಕರಾಗುವುದನ್ನು ರದ್ದುಪಡಿಸುವ ಯೋಜನೆಯನ್ನು ಹಾಕಿಕೊಂಡಿದೆಯಂತೆ. ಪತ್ನಿಯರು ತಮ್ಮ ಗಂಡಂದಿರಿಗೆ ಸಂಪೂರ್ಣ ವಿಧೇಯರಾಗಿರಬೇಕು ಎಂದು ಅವರು ಸಾರಿದ್ದಾರಂತೆ. ಇದರಿಂದ ಅಸಮಾಧಾನಗೊಂಡ ಆ ಚರ್ಚಿನ ಅನೇಕ ಸದಸ್ಯರು ಅದನ್ನು ಬಿಟ್ಟು ಹೋಗಿರುವರೆಂದು ವರದಿಯಾಗಿದೆ. ಇತ್ತೀಚೆಗೆ ಆ ಚರ್ಚನ್ನು ತ್ಯಜಿಸಿದ ಪ್ರಮುಖ ವ್ಯಕ್ತಿಯೆಂದರೆ ಅಮೆರಿಕದ ಮಾಜಿ ಅಧ್ಯಕ್ಷರಾಗಿದ್ದ ಜಿಮ್ಮಿ ಕಾರ್ಟರ್.

ರಾಗದ್ವೇಷಗಳು ಪರಸ್ಪರ ವಿರುದ್ಧ ಭಾವಗಳೆಂದು ಕಂಡುಬಂದರೂ ಅವು ಪರಸ್ಪರ ಪರಿವರ್ತನೆಯಾಗುವಂತಹವುಗಳು. ಒಂದು ವಸ್ತುವಿನ ವಿಷಯದಲ್ಲಿ ತೀವ್ರ ರಾಗ ಅಥವಾ ವ್ಯಾಮೋಹವಿದ್ದರೆ, ಆ ವಸ್ತು ನಮಗೆ ದಕ್ಕದ ಪರಿಸ್ಥಿತಿಯುಂಟಾದರೆ ಸ್ವಾಭಾವಿಕವಾಗಿ ಆ ವಸ್ತುವಿನ ಬಗ್ಗೆ ದ್ವೇಷವುಂಟಾಗುತ್ತದೆ. ರಾಗವೇ ದ್ವೇಷವಾಗಿ ಪರಿಣಮಿಸುತ್ತದೆ. ಒಂದು ವೇಳೆ ಅದು ದಕ್ಕಿದಾಗಲೂ ಅದು ನಮ್ಮ ಸ್ವಂತದ್ದಾಗಿರಬೇಕು, ಅದಕ್ಕೆ ತನ್ನದೇ ಸ್ವಾತಂತ್ರ್ಯವಿರಕೂಡದು ಎಂದು ನಾವು ಬಯಸುತ್ತೇವೆ.

ಸ್ತ್ರೀಯರ ವಿಷಯಕ್ಕೆ ಇದು ಹೆಚ್ಚು ಅನ್ವಯಿಸುತ್ತದೆ. ಸ್ತ್ರೀಯರ ಆಕರ್ಷಣೆ ಅತ್ಯಂತ ತೀವ್ರವಾದುದು. ಇದರಿಂದಾಗಿ ಅವರ ಮೇಲೆ ಒಡೆತನವನ್ನು ಸ್ಥಾಪಿಸುವ ಪ್ರವೃತ್ತಿಯೂ ತೀವ್ರವಾಗಿರುತ್ತದೆ. ಆದಷ್ಟು ಅವರ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಪ್ರಯತ್ನ ನಡೆಯುತ್ತದೆ. ಇಲ್ಲಿ ರಾಗವೇ ದ್ವೇಷವಾಗಿ ಪರಿವರ್ತಿತವಾಗುವುದನ್ನು ನೋಡುತ್ತೇವೆ.

ದೈಹಿಕ ಆಕರ್ಷಣೆಯನ್ನು ಮೀರಿದ ಶುದ್ಧ ಪ್ರೀತಿ ಇದ್ದರೆ ಆಗ ಅವರಿಗೂ ಸಮಾನ ಸ್ವಾತಂತ್ರ್ಯವನ್ನು ನೀಡುವ ಉದಾರ ಮನೋಭಾವವುಂಟಾಗುತ್ತದೆ. ಧರ್ಮದ ಉದ್ದೇಶವೇ ದೇಹಭಾವವನ್ನು ಮೀರಿಹೋಗುವುದಾದರೂ, ಧರ್ಮದ ಹೆಸರಿನಲ್ಲಿಯೇ ದೇಹಾತ್ಮ ಭಾವವನ್ನು ಆಧರಿಸಿದ ಈ ಪಕ್ಷಪಾತ ಶೋಚನೀಯವಾದುದು. ☐

## ಮೌನದ ಮೋಹ

ಶ್ರೀರಾಮಕೃಷ್ಣರು ಹೇಳುತ್ತಾರೆ, ಆಗಾಗ ಏಕಾಂತ ಸ್ಥಳಕ್ಕೆ ಹೋಗಿ ಮೌನವಾತಾವರಣದಲ್ಲಿ ಧ್ಯಾನ, ಜಪ, ಪ್ರಾರ್ಥನೆಗಳಲ್ಲಿ ಕಾಲ ಕಳೆಯಬೇಕು, ಎಂದು. ಗದ್ದಲದ ಗಡಿಬಿಡಿಯ ಜೀವನದಿಂದ ಸ್ವಲ್ಪ ಕಾಲ ದೂರವಿದ್ದು ನಮ್ಮ ಜೀವನದ ಧ್ಯೇಯದ ಕಡೆ ಮನಸ್ಸನ್ನು ಹರಿಸಬೇಕೆಂಬುದು ಅವರ ಅಭಿಪ್ರಾಯ. ಅವರು ಈ ಮಾತನ್ನು ಹೇಳಿದಾಗ ನಾಗರಿಕ ಜೀವನ ಇಷ್ಟೊಂದು ಗೊಂದಲಮಯವೂ ಸಂಕೀರ್ಣವೂ ಗದ್ದಲದಿಂದ ಕೂಡಿದುದೂ ಆಗಿರಲಿಲ್ಲ. ಅಷ್ಟೇ ಅಲ್ಲದೆ ಪರಿಸರ ಮಾಲಿನ್ಯವೂ ಇಷ್ಟೊಂದಿರಲಿಲ್ಲ.ಅವರ ಮಾತು ಹಿಂದಿಗಿಂತಲೂ ಈಗ ಹೆಚ್ಚು ಪ್ರಸ್ತುತವಾಗಿ ಕಂಡುಬರುತ್ತಿದೆ. ಈಗ ಅವರ ಮಾತನ್ನು ಕೇಳದೆಯೇ ಜನರು ಪ್ರಶಾಂತ ಸ್ಥಳಗಳಿಗಾಗಿ ಹಾತೊರೆಯುತ್ತಿರುವರು. ಈಗಿನ ನಗರ ಜೀವನದ ಪರಿಸ್ಥಿತಿಯೇ ಅವರನ್ನು ಅಂತಹ ಸ್ಥಳಗಳಿಗೆ ತಳ್ಳುತ್ತಿದೆ.

ಅಮೆರಿಕದ ಸೌತ್ ಕಾರೊಲಿನದಲ್ಲಿರುವ ಮೆಪ್ಕಿನ್ ಅಬ್ಬೆ (*Mepkin Abbey*) ಎಂಬ ಸಂನ್ಯಾಸಿ ಮಠಕ್ಕೆ ಪ್ರವಾಸಿಗಳ ತಂಡವೇ ಬರುತ್ತದಂತೆ. ಎಲ್ಲ ಧರ್ಮಕ್ಕೆ ಸೇರಿದ ಸ್ತ್ರೀಪುರುಷರು ೨೧ನೇ ಶತಮಾನದ ಅತಿವೇಗದ ಜೀವನದಿಂದ ಸುಸ್ತಾಗಿ ಶಾಂತಿಯನ್ನರಸಿಕೊಂಡು ಅಲ್ಲಿಗೆ ಬರುತ್ತಾರೆ. ಅವರೂ ಸಂನ್ಯಾಸಿಗಳಂತೆ ಪ್ರಾರ್ಥಿಸುತ್ತಾರೆ, ಮೌನವನ್ನು ಆಚರಿಸುತ್ತಾರೆ, ಅವರಂತೆಯೇ ಶಾಖಾಹಾರವನ್ನು ಸೇವಿಸುತ್ತಾರೆ. ಹೀಗೆ ಕ್ರೈಸ್ತ, ಬೌದ್ಧ, ಹಿಂದೂ ಮುಂತಾದ ಎಲ್ಲ ಆಧ್ಯಾತ್ಮಿಕ ಸತ್ಸಂಗ ಕೇಂದ್ರಗಳಿಗೂ ಜನ ಶಾಂತಿಯನ್ನರಸಿಕೊಂಡು ಹೋಗುತ್ತಾರೆ. ಇಂಟರ್‌ನೆಟ್ ಮೂಲಕವೂ ಇವುಗಳ ಬಗ್ಗೆ ಸಾಕಷ್ಟು ಮಾಹಿತಿ ದೊರೆಯುತ್ತದೆ.

ಮನುಷ್ಯನಲ್ಲಿ ಪ್ರವೃತ್ತಿ ಮತ್ತು ನಿವೃತ್ತಿ ಎರಡೂ ಸ್ವಭಾವಗಳಿರುತ್ತವೆ. ಪ್ರವೃತ್ತಿ ಎಂದರೆ ತನ್ನಕೇಂದ್ರದಿಂದ ದೂರ ಹೋಗುವುದು, ಅರ್ಥಾತ್ ಬಾಹ್ಯಚಟುವಟಿಕೆಗಳಲ್ಲಿ ಮಗ್ನನಾಗುವುದು. ನಿವೃತ್ತಿಯೆಂದರೆ ತನ್ನ ಕೇಂದ್ರದ ಕಡೆ ಹೋಗುವುದು. ಇದು ಶಾಂತಿಯಿಂದಿರುವ ಬಯಕೆ. ಇವೆರಡೂ ಅವನಿಗೆ ಆವಶ್ಯಕ. ಜೀವನದಲ್ಲಿ ಪ್ರವೃತ್ತಿ-ನಿವೃತ್ತಿಗಳ ಹೊಂದಾಣಿಕೆಯಿಂದ ಆರೋಗ್ಯಕರ ಮನಃಸ್ಥಿತಿಯನ್ನು ಪಡೆಯಬಹುದು. ಪ್ರಸಿದ್ಧ ಮನಶ್ಶಾಸ್ತ್ರಜ್ಞರಾದ ಎರಿಕ್ ಫ್ರೋಮ್ ಹೇಳುತ್ತಾರೆ : 'ರಚನಾತ್ಮಕ ಕ್ರಿಯೆಯ ಲಕ್ಷಣವೇ ಕ್ರಿಯೆ ಮತ್ತು ವಿಶ್ರಾಂತಿಗಳ ಲಯಬದ್ಧ ಬದಲಾವಣೆ. ಒಬ್ಬ ವ್ಯಕ್ತಿಯು ತಾನಿಚ್ಛಿಸಿದಾಗ, ಆವಶ್ಯಕವಿದ್ದಾಗ, ತನ್ನೊಡನೆ ಏಕಾಂತದಲ್ಲಿ ಶಾಂತಿಯಿಂದಿರಲು ಸಾಧ್ಯವಾದಾಗಲೇ ರಚನಾತ್ಮಕ ಕೆಲಸ, ಪ್ರೀತಿ ಮತ್ತು ಚಿಂತನೆ ಸಾಧ್ಯವಾಗುವಂತಹುದು. ತನ್ನ ಧ್ವನಿಯನ್ನು ಕೇಳುವ ಸಾಮರ್ಥ್ಯವಿದ್ದಾಗಲೇ ಇತರರು ಹೇಳಿದುದನ್ನು ಕೇಳಲು ಸಾಧ್ಯವಾಗುತ್ತದೆ. ಇತರರೊಡನೆ ಯೋಗ್ಯ ಸಂಬಂಧವನ್ನು ಪಡೆಯಲು ತನ್ನೊಡನೆ ತಾನಿರುವುದು ಆವಶ್ಯಕ.' ☐